ಸಿ. ಸಿ. ನಂಃ 2324/2024

ಪಿ.ಡಬ್ಲ್ಯೂಃ 02

( ದಿಃ 20.02.2025 ರ ನ್ಯಾಯಾಲಯದ ಆದೇಶದ ಪ್ರಕಾರ ಇಂದು ದಿನಾಂಕಃ 24.02.2025 ರಂದು ಪಿ. ಡಬ್ಲು 2 ರವರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಮುಖ್ಯ ವಿಚಾರಣೆಃ ಪಿರ್ಯಾದಿ ಪರ ವಕೀಲರಾದ ಶ್ರೀ ಎ. ಎ. ಎ. ರವರಿಂದಃ**

(8. ದಿಃ 15.01.2025 ರ ಎಸ್ಟಿಮೇಷನ್ ಅನ್ನು ನಿಪಿ–7,

9. ಸಿಡಿಯನ್ನು ನಿಪಿ–8,

10. ಕಲಂ 65 ಬಿ ಪ್ರಮಾಣಪತ್ರವನ್ನು ನಿಪಿ–9 ಎಂದು ಗುರುತಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್. ಎ. ಕೆ. ರವರಿಂದಃ**

11. ನನ್ನ ತಂದೆ ನಾಗೇಶ ವೆರ್ಣೇಕರ್ ರವರು ಸಿವಿಲಿ ಇಂಜಿನಿಯರ್ ಎಂದರೆ ಸರಿ. ನನ್ನ ತಂದೆ ಕಟ್ಟಡ ವಗೈರೆಗಳ ಪ್ಲಾನ್ ತಯಾರಿಸಿರುತ್ತಾರೆ ಹಾಗೂ ಕಟ್ಟಡ ನಿರ್ಮಿಸುವಾಗ ಅದರ ಕಾಮಗಾರಿಯ ಮೇಲ್ವಿಚಾರಣೆ ಮಾಡುತ್ತಾರೆ ಎಂದರೆ ಸಾಕ್ಷಿ ನನ್ನ ತಂದೆ ಕಟ್ಟಡ ವಗೈರೆಗಳ ಪ್ಲಾನ್ ಮಾಡುವುದಿಲ್ಲ ಆದರೆ ಅವರು ಕಟ್ಟಡಗಳ ಸ್ಟ್ರಕ್ಚರಲ್ ಡಿಸೈನ್ ಮಾಡುತ್ತಾರೆ, ನನ್ನ ತಾಯಿ ಗೀತಾ ವೆರ್ಣೇಕರ್ ರವರು ಆರ್ಕಿಟೆಕ್ಟ ಆಗಿದ್ದು ಅವರು ಕಟ್ಟಡಗಳ ಪ್ಲಾನ್ ಹಾಗೂ ಇಂಟಿರಿಯರ್ ಡಿಸೈನ್ ಹಾಗೂ ಕಟ್ಟಡಗಳ ಮೌಲ್ಯಮಾಪನವನ್ನು ಅಕ್ಷಯ ಕೋ–ಅಪರೇಟಿವ್ ಸೊಸೈಟಿಗೆ ಸಂಬಂಧಿಸಿದಂತೆ ಮಾತ್ರ ಮಾಡುತ್ತಾರೆ ಅಂತಾ ಸಾಕ್ಷಿ ಉತ್ತರಿಸುತ್ತಾರೆ.

12. ನನ್ನ ತಂದೆ ಹಾಗೂ ತಾಯಿ ಸೇರಿ ಬೃಂದಾವನ ಅಪಾರ್ಟಮೆಂಟ್ ಎಂಬ ಕಟ್ಟಡವನ್ನು ಕಟ್ಟಿಸಿ ಅದರ ಇಂಟಿರಿಯರ್ ಡಿಸೈನನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿ ನಿಖರವಾಗಿ ಹೇಳಬೇಕೆಂದರೆ ನನ್ನ ತಂದೆ ತಾಯಿಯವರು ಸದ್ರಿ ಅಪಾರ್ಟಮೆಂಟಿನ ಜಿ–3 ಮತ್ತು ಜಿ–4 ಮನೆಗಳ ಇಂಟಿರಿಯರ್ ಡಿಸೈನಿಂಗ್ ಕೆಲಸವನ್ನು ಮಾಡಿರುತ್ತಾರೆ ಅಂತಾ ಉತ್ತರಿಸುತ್ತಾರೆ. ನಿಪಿ. 7 ರಲ್ಲಿ ಕಾಣುವ ಫೋಟೋಗಳು ಸದ್ರಿ ಜಿ–3 ಮತ್ತು ಜಿ–4 ಮನೆಗಳ ಇಂಟಿರಿಯರ್ ಡಿಸೈನ್

ಮಾಡಿರುವ ಪೋಟೋಗಳು ಎಂದರೆ ಸರಿ. ಸಾಮಾನ್ಯವಾಗಿ ನಿಪಿ–7 ರಲ್ಲಿ ಕಾಣುವ ಪೋಟೋಗಳು ಯಾವದೇ ಅಪಾರ್ಟಮೆಂಟಿನ ಮನೆಗಳಲ್ಲಿ ತೆಗೆದರೆ ಸಿಗುವ ಪೋಟೋಗಳಾಗಿರುತ್ತವೆ ಎಂದರೆ ಸರಿಯಲ್ಲ. ನಿಪಿ –7 ರಲ್ಲಿ ಕಾಣುವ ಪೋಟೋಗಳಿಗೂ ಆರೋಪಿ ಖರೀದಿಸಿರುವ ಅಪಾರ್ಟಮೆಂಟಿಗೂ ಯಾವದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿಯವರು ಇಂಜಿನಿಯರ್, ಆರ್ಕಿಟೆಕ್ಟ ಹಾಗೂ ಇಂಟಿರಿಯರ್ ಡಿಸೈನರ್ ಆಗಿರುವುದರಿಂದ ಯಾವದೇ ಪ್ಲಾಟಿನ ಪೋಟೋ ಬಳಸಿಕೊಂಡು ನಿಪಿ –7 ರಂತೆ ಈ ಕೇಸಿನಲ್ಲಿ ಹಾಜರುಪಡಿಸಲಾಗಿದೆ ಎಂದರೆ ಸರಿಯಲ್ಲ. ಆದ್ದರಿಂದ ಆರೋಪಿಗೂ, ಸದ್ರಿ ಪೊಟೋಗಳಿಗೂ ಯಾವದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

13. ನಿಮ್ಮ ಶೈಕ್ಷಣಿಕ ವಿದ್ಯಾರ್ಹತೆ ಏನು ಅಂದರೆ ಸಾಕ್ಷಿ ಬ್ಯಾಚುಲರ್ ಆಪ್ ಆರ್ಕಿಟೆಕ್ಚರ್ ( ಬಿ. ಆರ್ಚ್ ) ಅಂತಾ ಉತ್ತರಿಸುತ್ತಾರೆ. ನೀವು ಕಂಪ್ಯೂಟರಿನಲ್ಲಿ ಏನಾದರೂ ಪರಿಣಿತಿಯನ್ನು ಹೊಂದಿದ್ದೀರಾ ಎಂದರೆ ಸಾಕ್ಷಿ ಇಲ್ಲ ಅಂತಾ ಉತ್ತರಿಸುತ್ತಾರೆ. ನಾನು ಬಳಸಿರುವ ಏಸುಸ್ ಕಂಪ್ಯೂಟರಿನ ಸ್ಟೋರೇಜ್ ಸಾಮರ್ಥ್ಯ ಎಷ್ಟು ಎಂದರೆ ಸಾಕ್ಷಿ 1 ಟಿಬಿ ಹಾರ್ಡಡಿಸ್ಕ, 16 ಜಿ ಬಿ ರಾಮ್ ಸಾಮರ್ಥ್ಯ ಇದೆ ಅಂತಾ ಉತ್ತರಿಸುತ್ತಾರೆ. ನಿಪಿ –8 ರ ಸಿಡಿಯಲ್ಲಿ ಶೇಖರಿಸಿರುವ ವಿಡಿಯೋ ದೃಶ್ಯಾವಳಿಗಳನ್ನು ಯಾವ ದಿನಾಂಕದಂದು ವಿಡಿಯೋ ಚಿತ್ರೀಕರಣ ಮಾಡಿರುತ್ತೀರಿ ಎಂದರೆ ಸಾಕ್ಷಿ 2021 ನೇ ಇಸವಿಯಲಿ ಚಿತ್ರೀಕರಣ ಮಾಡಿದ್ದು ತಿಂಗಳು ಮತ್ತು ದಿನಾಂಕ ನಿಖರವಾಗಿ ನನಗೆ ಈಗ ಹೇಳಲು ಆಗುವುದಿಲ್ಲ, ಆದರೆ ಚಿತ್ರೀಕರಣ ಮಾಡಿರುವ ದಿನಾಂಕ, ತಿಂಗಳು ಮತ್ತು ಇಸವಿ ದೃಶ್ಯಾವಳಿಯಲ್ಲಿ ಕಂಡುಬರುತ್ತದೆ ಅಂತಾ ಉತ್ತರಿಸುತ್ತಾರೆ. ಸದ್ರಿ ವಿಡಿಯೋ ಚಿತ್ರೀಕರಣ ಆಗಿ ಎಷ್ಟು ಸಮಯದ ನಂತರ ಕಂಪ್ಯೂಟರಿನಲ್ಲಿ ಅದನ್ನು ಸಂಸ್ಕರಿಸಿ ಸಿಡಿಯಲ್ಲಿ ಶೇಖರಣೆ ಮಾಡಿರುತ್ತೀರಿ ಎಂದರೆ ಸಾಕ್ಷಿ ವಕೀಲರು ಸಲಹೆ ನೀಡಿದ ಪ್ರಕಾರ ಕಳೆದ ಜನವರಿ ತಿಂಗಳಿನಲ್ಲಿ ಮಾಡಲಾಗಿದೆ ಅಂತಾ ಉತ್ತರಿಸುತ್ತಾರೆ. ನಿಪಿ–8 ರ ಸಿಡಿಯಲ್ಲಿ ಈ ಮೊದಲೇ ನನ್ನ ಸಾಕ್ಷ್ಯ ನೀಡುವ ಸಮಯದಲ್ಲಿ ಹಾಜರುಪಡಿಸಲು ನನಗೆ ಯಾವದೇ ತೊಂದರೆ ಇರಲಿಲ್ಲ ಎಂದರೆ ಸರಿ.

14. ನನ್ನ ವಿವೋ ವಿ19 ಮೊಬೈಲ್ ಪೋನ್ ಯಾವ ಕಂಪನಿಯದ್ದು ಅಂದರೆ ಸಾಕ್ಷಿ ವಿವೋ ಕಂಪನಿಯದ್ದು ಅಂತಾ ಉತ್ತರಿಸುತ್ತಾರೆ. ಅದು ಯಾವ ಮೇಕ್ ಎಂದರೆ ಸಾಕ್ಷಿ ಈಗ ನನಗೆ ಹೇಳಲು ಆಗುವುದಿಲ್ಲ ಅಂತಾ ಉತ್ತರಿಸುತ್ತಾರೆ.

15. ಈ ಪ್ರಕರಣವನ್ನು ನನ್ನ ತಂದೆಯವರೇ ಸಲ್ಲಿಸಿದ್ದರು ಎಂದರೆ ಸರಿ. ನಾನು ಅವರ ಜಿಪಿಎ ಹೋಲ್ಡರ್ ಆಗಿ ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿ. ನಿಪಿ–9 ರ ಪ್ರಮಾಣಪತ್ರವನ್ನು ನೀಡಲು ನಿಮಗೆ ಏನಾದರೂ ವಿಶೇಷ ಪರಿಣತಿ ಇದೆಯೇ ಎಂದರೆ ಸಾಕ್ಷಿ ನಾನೇ ವಿಡಿಯೋ ರೆಕಾರ್ಡಿಂಗ್ ಮಾಡಿ ಕಂಪ್ಯೂಟರಿನಲ್ಲಿ ಸಂಸ್ಕರಿಸಿರುವುದರಿಂದ ಪ್ರಮಾಣಪತ್ರ ನೀಡಿರುತ್ತೇನೆ ಅಂತಾ ಉತ್ತರಿಸುತ್ತಾರೆ. ಈ ಪ್ರಕರಣಕ್ಕೆ ಅನುಕೂಲವಾಗಲಿ ಅಂತಾ ನಾನು ನಿಪಿ–9 ರ ಪ್ರಮಾಣಪತ್ರವನ್ನು ಸೃಷ್ಟಿ ಮಾಡಿಕೊಂಡು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ–7 ರಲ್ಲಿ ಶೇಖರಿಸಿರುವ ವಿಡಿಯೋ ದೃಶ್ಯಾವಳಿಗಳು ಟ್ಯಾಂಪರಿಂಗ್ ಆಗದೇ ಒರಿಜಿನಲ್ ಆಗಿರುತ್ತದೆ ಎಂಬ ಬಗ್ಗೆ ದಾಖಲೆಗಳು ಇವೆಯೇ ಎಂದರೆ ಸಾಕ್ಷಿ ಅದು ಒರಿಜಿನಲ್ ಆಗಿಯೇ ಇದೆ ಅಂತಾ ಉತ್ತರಿಸುತ್ತಾರೆ. ನಾನು ಹಾಜರುಪಡಿಸಿರುವ ನಿಪಿ–7 ರಲ್ಲಿ ಕಾಣುವ ವಿಡಿಯೋ ದೃಶ್ಯಾವಳಿಗಳಲ್ಲಿ ನಾನು, ನನ್ನ ತಂದೆ, ತಾಯಿ ಹಾಗೂ ಆರೋಪಿಯ ಗಂಡ ಮಾತ್ರ ಇರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಆರೋಪಿತರು ಅಲ್ಲಿರಲಿಲ್ಲ ಎಂದರೆ ಸರಿ. ಸದ್ರಿ ವಿಡಿಯೋದಲ್ಲಿ ನಾನು ಆರೋಪಿಗೆ ನಿಮ್ಮ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ ಅಂತಾ ಬೆದರಿಕೆ ಹಾಕಿರುವುದು ಕಂಡುಬರುತ್ತದೆ ಎಂದರೆ ಸಾಕ್ಷಿ ನಾವೆಲ್ಲರೂ ಅವರಿಗೆ ತಿಳಿಹೇಳುತ್ತಿದ್ದೆವು ಅಂತಾ ಉತ್ತರಿಸುತ್ತಾರೆ. ಸದ್ರಿ ವಿಡಿಯೋ ಸಂಭಾಷಣೆಯಲ್ಲಿ ನಾನು 7 ವರ್ಷಗಳಿಂದ ಹಣ ಕೇಳುತ್ತಿದ್ದರೂ ಆರೋಪಿ ಕೊಡುತ್ತಿಲ್ಲ ಎಂಬುದಾಗಿ ಹೇಳಿರುತ್ತೇವೆ ಎಂದರೆ ಸರಿ. ನಾವು ಆರೋಪಿಯ ಗಂಡನಿಗೆ ಹಣ ಕೊಡದೇ ಇದ್ದರೆ ಶನಿ ದೇವರಂತೆ ಕಾಡಿಸುತ್ತೇವೆ ಅಂತಾ ಹೇಳಿರುತ್ತೇವೆ ಎಂದರೆ ಸರಿ. ನನ್ನ ತಂದೆಯವರು ಆರೋಪಿಯ ಗಂಡನಿಗೆ ನಾವು ಪಿ ಎಸ್ ಐ ರವರ ಮನೆಯನ್ನು ಕಟ್ಟಿಸಿದ್ದೇವೆ ಹಾಗೂ ಕಾರವಾರದಲ್ಲಿ ದೊಡ್ಡದೊಡ್ಡ ಜನರ ಪರಿಚಯ ನನಗೆ ಇರುತ್ತದೆ, ಆದ್ದರಿಂದ ನಾವು ನಿನಗೆ ಸುಮ್ಮನೆ ಬಿಡುವುದಿಲ್ಲ ಅಂತಾ ಬೆದರಿಕೆ ಹಾಕಿರುತ್ತೇವೆ ಎಂದರೆ ಸರಿ.

16. ನನಗೆ ಕಂಪ್ಯೂಟರ್ ಬಗ್ಗೆ ಯಾವದೇ ಜ್ಞಾನ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಕಂಪ್ಯೂಟರ್ ಪರಿಣತಳೂ ಅಲ್ಲ ಎಂದರೆ ಸಾಕ್ಷಿ ನಾನು ವಿದ್ಯಾವಂತೆಯಾಗಿದ್ದರಿಂದ ಕಂಪ್ಯೂಟರ್ ಜ್ಞಾನ ಇದೆ ಅಂತಾ ಉತ್ತರಿಸುತ್ತಾರೆ. ನನಗೆ ನಿಪಿ–9 ರ ಪ್ರಮಾಣಪತ್ರವನ್ನು ನೀಡಲು ಯಾವದೇ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ವಿಡಿಯೋ ಚಿತ್ರೀಕರಣ ನಡೆಯುವಾಗ ಆರೋಪಿ ಅಲ್ಲಿ ಇರಲಿಲ್ಲ ಹಾಗೂ ಈ ಪ್ರಕರಣಕ್ಕೂ ಸದ್ರಿ ವಿಡಿಯೋ ಚಿತ್ರೀಕರಣದಲ್ಲಿನ ಸಂಭಾಷಣೆಗಳಿಗೂ ಯಾವದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

17. ಈ ಪ್ರಕರಣಕ್ಕೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ನಿಪಿ-7 ರಿಂದ 9 ರ ದಾಖಲೆಗಳನ್ನು ಸೃಷ್ಟಿಮಾಡಿಕೊಂಡು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

Sd/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ., ಕಾರವಾರ